(*c*) The question does not arise in view of the reply to clause (*b*).

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ತಮ್ಮ ಉತ್ತರದಲ್ಲಿ ಅಂದಾಜು ತಯಾರಾಗಿಲ್ಲವೆಂದು ಹೇಳುತ್ತೀರಿ. ತಾವು ಆ ಜಾಗವನ್ನು ಅಂದರೆ ಆ ಸ್ಥಳವನ್ನು ಅಜಮಾಯಿಷಿ ಮಾಡಿದ್ದೀರಾ ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಈಗ ಅಂದಾಜು ತಯಾರಾಗಿದೆ, ಇದು ೪೦ ಪ್ರೋಗ್ರಾಂಗಳಲ್ಲಿ ಸೇರಿದೆ

Development of Western Ghats.

32 SRI N. B. SIRDESAI (Khanapur)—Will the Minister of State for Minor Irrigation and Protocol be pleased to refer to the replies given to starred question No. 328 (376) on 17th March 1976 and state :—

(*a*) whether Plans and Estimates of the Scheme for development of Western Ghats Region have been prepared;

(*b*) whether Government of India have accorded sanction for the scheme and have allotted Rs. 2 58 lakhs for Khanapur taluk; if so, when the implementation of the scheme would be commenced ?

SRI H C SRIKANTAIAH (Minister of State for Minor Irrigation and Protocol) —

(*a*) Yes.

(*b*) Yes, at an estimated cost of 2·57 lakhs. The work of barrage-*cum*-bridge on Tottinala near Bogur in Khanapur taluk has been physically completed.

SRI N. B. SIRDESAI.—With reference to your answer (a) May I know whether the development of Western Ghat Division scheme comprises of barrage work only or whether other developmental works are also included in this ?

† SRI H C. SRIKANTIAH.—One work has already been completed, *i.e.* the bridge near Tottinala of Bogur in Khanapur Taluk for which an expenditure of Rs 2.90 lakhs was made. Another work yet to be completed is the Upper Malaprabha Project That comes under Medium Irrigation Project scheme. That will also be taken up separately, after getting the approval of the P.W.D.

SRI N. B SIRDESAI.—Whether the Government is aware of the fact that the barrage work which has been taken up falls in the eastern side of the Taluka and does not fall in the Western Ghat Region and thereby the Government have successfully trying to hoodwink the Marathi people ?

SRI H. C. SREEKANTIAH.—That much details are not available with me.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ. ಪುಸಕ್ತ ಸಾಲಿಗೆ ಪಶ್ಚಿಮ ಘಟ್ಟದ ಯೋಜನೆಯ ಪ್ರಕಾರ ನಮ್ಮ ಮಲೆನಾಡು ತಾಲ್ಲೂಕಿಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದಿರಿ, ಆ ಕಾರ್ಯಕ್ರಮಗಳ ಪೈಕಿ ಈಗಾಗಲೇ ಎಷ್ಟು ಪೂರ್ಣವಾಗಿವೆ, ಮತ್ತು ಮುಂದಿನ ಸಾಲಿಗೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿಕೊಂಡಿದ್ದೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ —ಮಾನ್ಯ ಸದಸ್ಯರು, ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ನಕ್ಷೆಯನ್ನು ತಯಾರು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಈ ಮಲೆನಾಡು ಪಶ್ಚಿಮ ಘಟ್ಟದ ನಕ್ಷೆಯಲ್ಲಿ ಬರುತ್ತದೆ. ಆದುದರಿಂದ ತಾವು ಇದಕ್ಕೆ ಮೊದಲು ಉತ್ತರ ಕೊಡಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೆ, ಈ ಪ್ರೋಗ್ರಾಂನಲ್ಲಿ ಸಂಮಾರು ೪೦ ಕಾಮಗಾರಿಗಳು ಸೇರಿವೆ, ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡಲು ನನಗೆ ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಈಗ ತಯಾರು ಮಾಡಿರುವ ನಕ್ಷೆಯ ಪ್ರಕಾರವೇ ಉತ್ತರ ಕೊಟ್ಟರೆ ಎಲ್ಲಾ ಸರಿಬರುತ್ತದೆ.

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ನಾನು ಈಗ ಉತ್ತರ ಕೊಟ್ಟಿದ್ದು ಖಾನಾಪುರ ತಾಲ್ಲೂಕಿಗೆ ಮಾತ್ರ ಸೇರಿದ್ದು. ತಾವು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಈ ಪ್ರೊಗ್ರಾಂನಲ್ಲಿ ಎಷ್ಟು ಕಾಮಗಾರಿಗಳು ಪೂರ್ಣ ಆಗುತ್ತವೆ, ಈಗ ಎಷ್ಟು ಪೂರ್ಣ ಆಗಿವೆ ಎಂಬುದನ್ನು ವಿವರವಾಗಿ ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ನಕ್ಷೆಯ ಪ್ರಕಾರ ಈಗ ಏನೇನು ಕೆಲಸಗಳನ್ನು ಮಾಡಿದ್ದೀರಿ ಅದನ್ನು ಮೊದಲು ಹೇಳಿ

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ತಮಗೆ ವಿವರ ಬೇಕಾದರೆ ಆಮೇಲೆ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ತಾವು ನಕ್ಷೆಯನ್ನು ತಯಾರು ಮಾಡಿದ ಮೇಲೆ ಅದರಲ್ಲಿ ಏನಿದೆ ಅದನ್ನು ಮಾತ್ರ ಹೇಳಿದರೆ ನಮಗೆ ಸಾಕು.

ಶ್ರೀ ಹೆಚ್. ಸಿ ಶ್ರೀಕಂಠಯ್ಯ.—ನಮ್ಮ ಹತ್ತಿರ ಬರೀ ಖಾನಾಪುರ ತಾಲ್ಲೂಕಿಗೆ ಸಂಬಂಧಪಟ್ಟ ನಕ್ಷೆ ಮಾತ್ರ ಇದೆ.

SRI KAGODU THIMMAPPA.—May I know whether they have prepared plans and what are the details ?

MADAM SPEAKER.—The question reads like this : "Whether the Government of India have accorded sanction for the scheme and have allotted Rs. 2 58 lakhs for Khanapur taluk if so, when the implementation of the scheme would be commenced".

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಕೊಟ್ಟಿರುವುದು ಒಂದು ಕಡೆ ಇದೆ, ಖರ್ಚು ಮಾಡಿರುವುದು ಒಂದು ಕಡೆ ಇದೆ. ಅದನ್ನು ಹೇಳಿದರೆ ಸಾಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಸರಿಯಾದ ಉತ್ತರ ಒದಗಿಸುವುದಾಗಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ತಾವು ಅಷ್ಟಾದರೂ ಮಾಡಬೇಕು.